


ಚಿತ್ರಗಳು: ಎಂ.ಎಸ್‌ ಮಂಜುನಾಥ್

# ಯುವಮನದಲ್ಲಿ ಕನಕ ದೀವಿಗೆ...

**ಕನಕದಾಸರ ಸಾಹಿತ್ಯ, ವಿಚಾರಧಾರೆ, ಸಾಮಾಜಿಕ ಚಿಂತನೆಗಳನ್ನು ಯುವಜನರಿಗೆ ತಲುಪಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ ಬೆಂಗಳೂರಿನ 'ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ'. ಗ್ರಂಥಾಲಯದೊಂದಿಗೆ, ಹಲವು ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಕನಕದಾಸರ ಕುರಿತ ಓದನ್ನು, ಆಸಕ್ತಿಯನ್ನು ಪ್ರೇರೇಪಿಸುತ್ತಿದೆ.**

■ ಎಸ್ಸೆನ್

16ನೇ ಶತಮಾನದ ಸಂತಕವಿ ಕನಕದಾಸರಿಗೆ ದಾಸ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ. ನಿತ್ಯದ ಬದುಕಿನ ಜಂಜಾಟಗಳನ್ನು, ಸಮಾಜದ ಓರೆಕೋರೆಗಳನ್ನು ತಿದ್ದಲು ಬೇಕಾದ ಜೀವಪರ ನಿಲುವನ್ನು ತಮ್ಮ ಕೀರ್ತನೆಗಳ ಮೂಲಕ ಎತ್ತಿ ತೋರುತ್ತಾ, ತೀಡುತ್ತಾ ಜನರೆದೆಯಲ್ಲಿ ಅರಿವಿನ ಬೆಳಕು ಮೂಡಿಸಿದವರು.

ಸಮಾಜಕ್ಕೆ ದಾರಿದೀಪವಾಗಿರುವ ಕನಕರ ವಿಚಾರಧಾರೆಗಳು ಹಿಂದೆಂದಿಗಿಂತಲೂ ಇಂದಿಗೆ ಹೆಚ್ಚು ಪ್ರಸ್ತುತ. ಇದೇ ನಿಟ್ಟಿನಲ್ಲಿ ಅವರ ವಿಚಾರಧಾರೆಗಳನ್ನು ಯುವಮನಕ್ಕೆ ದಾಟಿಸುವ ಪ್ರಯತ್ನದಲ್ಲಿದೆ 'ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ'.

ಬೆಂಗಳೂರಿನ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿರುವ ಈ ಕೇಂದ್ರ, ಕನಕದಾಸರ ಚಿಂತನೆಗಳನ್ನು ಪಸರಿಸುವ ಕಾರ್ಯದಲ್ಲಿ ನಿರತವಾಗಿದೆ. 2012ರಲ್ಲಿ ಕನ್ನಡ ಭವನದಲ್ಲಿದ್ದ ಸಂಸ್ಥೆ ಇತ್ತೀಚೆಗೆ ಕಲಾಗ್ರಾಮದಲ್ಲಿ ತನ್ನ ಕಾರ್ಯಾರಂಭ ಮಾಡಿದೆ. ಕನಕ ಸಾಹಿತ್ಯ, ತತ್ವಪದಗಳು, ಕೀರ್ತನ ಸಾಹಿತ್ಯ, ದಾಸಸಾಹಿತ್ಯ, ಭಕ್ತಿಸಾಹಿತ್ಯ, ಸಂತ ಶರಣ ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳ ಸಂಗ್ರಹದ ಪುಟ್ಟ ಪರಾಮರ್ಶನಾ ಗ್ರಂಥಾಲಯವೂ ಇಲ್ಲಿದೆ. ಓದಿನ ಜೊತೆಜೊತೆಗೆ ಕನಕದಾಸರನ್ನು ಕೇಂದ್ರಿತವಾಗಿಟ್ಟುಕೊಂಡು ಹಲವು ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿದೆ. ತತ್ವಪದಕಾರರ ಕುರಿತ ಸಂಶೋಧನೆ, ಅಧ್ಯಯನವನ್ನು ಉತ್ತೇಜಿಸುತ್ತಿದೆ.

## ಕನಕದಾಸರ ಓದಿಗೆ ಗ್ರಂಥಾಲಯ

ಸುಮಾರು ಎರಡು ಸಾವಿರ ಪುಸ್ತಕಗಳ ಸಂಗ್ರಹ ಇಲ್ಲಿನ ಗ್ರಂಥಾಲಯದಲ್ಲಿದೆ. ತತ್ವಪದಗಳು, ಕೀರ್ತನೆಗಳು, ಭಕ್ತಿಸಾಹಿತ್ಯ ಒಳಗೊಂಡಂತೆ ಕನಕದಾಸರಿಗೆ ಸಂಬಂಧಿಸಿದ ಪುಸ್ತಕಗಳ ಸಂಗ್ರಹವೇ ಹೆಚ್ಚಿದೆ. 120 ಸಂಸ್ಥೆಗಳಿಂದ ಪುಸ್ತಕಗಳನ್ನು ಸಂಗ್ರಹಿಸಿದ್ದು, ಸಂಗ್ರಹ ಕಾರ್ಯ ಇನ್ನೂ ಮುಂದುವರೆದಿದೆ. ಕನಕರಿಗೆ ಸಂಬಂಧಿಸಿದ ಮತ್ತಷ್ಟು ಪುಸ್ತಕಗಳಿಗೆ ಬೇಡಿಕೆ ಇಡಲಾಗಿದೆ. ಕರ್ನಾಟಕ ಸಂಗೀತ ಅಭ್ಯಾಸ ಮಾಡುತ್ತಿರುವವರು, ವಿದ್ಯಾರ್ಥಿಗಳು ಈ ಗ್ರಂಥಾಲಯಕ್ಕೆ ಹೆಚ್ಚಿಗೆ ಭೇಟಿ ನೀಡುತ್ತಿರುತ್ತಾರೆ. ಸಾರ್ವಜನಿಕರಿಗೂ ಗ್ರಂಥಾಲಯ ಮುಕ್ತವಾಗಿದೆ.

ಓದಿಗೆ ಅನುಕೂಲವಾಗಲೆಂದು ಈ ಚಿಕ್ಕ ಗ್ರಂಥಾಲಯವನ್ನು ವಿಭಾಗಗಳನ್ನಾಗಿ ರೂಪಿಸಲಾಗಿದೆ. ಸಂಗೀತ ವಿಭಾಗ, ವಚನ ವಿಭಾಗ, ಕೀರ್ತನೆಗಳು, ದಾಸ ಸಾಹಿತ್ಯ ವಿಭಾಗ, ಮಕ್ಕಳ ವಿಭಾಗ ಎಂದು ವಿಭಜಿಸಲಾಗಿದೆ.

